2015 ಕ.ತೀ.ವ 74

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್

ಎಂ.ರಾಜು –ವಿರುದ್ಧ– ವೈ.ಸಿ. ಹೇಮರಾಜ್ ಮತ್ತು ಮತ್ತೊಬ್ಬರು*

ಮೋಟಾರು ವಾಹನ ಅಧಿನಿಯಮ ಕಲಂ 173(1)ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.

ಕ್ಲೇಮುದಾರನು ಟೆಂಪೋ ಟ್ರಾವಲರ್‌ನ ಕ್ಲೀನರ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ಚಾಲಕನ ಅತಿವೇಗ, ಅಜಾಗರೂಕತೆ ಮತ್ತು ದುಡುಕಿನ ಚಾಲನೆಯಿಂದ ವಿದ್ಯುತ್ ಕಂಬಕ್ಕೆ ಟೆಂಪೋ ಟ್ರಾವೆಲರ್ ಢಿಕ್ಕಿಹೊಡೆದ ಪರಿಣಾಮವಾಗಿ ಕ್ಲೇಮುದಾರನು ತೀವ್ರತರವಾಗಿ ಗಾಯಗೊಂಡ ಸಂದರ್ಭದಲ್ಲಿ ನ್ಯಾಯಾಧಿಕರಣದಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸುತ್ತಾನೆ. ಸಾಕ್ಷ್ಯಾಧಾರಗಳನ್ನಾಧರಿಸಿದ ನ್ಯಾಯಾಧಿಕರಣವು 2,21,000/– ರೂ. ಪರಿಹಾರ ಮೊತ್ತವನ್ನು ನಿರ್ಧರಿಸಿ ಐತೀರ್ಪು ನೀಡುತ್ತದೆ. ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಕ್ಲೇಮುದಾರನಿಂದ ಹಾಗೂ ನ್ಯಾಯಾಧಿಕರಣದ ಐತೀರ್ಪನ್ನು ಪ್ರಶ್ನಿಸಿ ವಿಮಾಕಂಪನಿಯಿಂದ ಪ್ರತ್ಯೇಕ ಸದರಿ ಮೇಲ್ಮನವಿಗಳನ್ನು ಸಲ್ಲಿಸಲಾಗಿದೆ.

ಸಾಕ್ಷ್ಯಾಧಾರಗಳನ್ನು ಮರುಪರಿಶೀಲಿಸಿದ ಉಚ್ಚ ನ್ಯಾಯಾಲಯವು ಕ್ಲೇಮುದಾರನು ತನ್ನ ಸಾಕ್ಷ್ಯದಲ್ಲಿ ತಾನು ವ್ಯವಸಾಯಗಾರನೆಂದು ಸ್ಪಷ್ಟೋಕ್ತಿಯಲ್ಲಿ ಹೇಳಿಕೆ ನೀಡಿದ್ದರೂ ನ್ಯಾಯಾಧಿಕರಣವು ವಿಮಾಕಂಪನಿ ಪರಿಹಾರವನ್ನು ನೀಡುವ ಹೊಣೆಯಿದೆಯೆಂದು ಹೇಳಬಾರದಿತ್ತು. ಆದರೆ ಪರಿಹಾರ ಮೊತ್ತವನ್ನು ವಿವಿಧ ಶೀರ್ಷಿಕೆಗಳಡಿಯಲ್ಲಿ ಹೆಚ್ಚಿಸಿ ಮೊತ್ತವನ್ನು 2,21,000/– ರೂ.ಗಳಿಂದ 2,78,000/– ರೂ.ಗಳಿಗೆ ಹೆಚ್ಚಿಸಲಾಗಿದೆ. ಪರಿಹಾರ ಮೊತ್ತವನ್ನು ವಾಹನ ಮಾಲೀಕನು ನೀಡುವಂತೆ ನಿರ್ದೇಶಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಕ್ಲೇಮುದಾರನ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದ ಉಚ್ಚನ್ಯಾಯಾಲಯವು ವಿಮಾಕಂಪನಿಯ ಮೇಲ್ಮನವಿಯನ್ನು ಪುರಸ್ಕರಿಸಿದೆ.

(ಪ್ಯಾರಾ: 9ರಿಂದ ಕಡೆಯವರೆಗೆ)

*ಎಂ.ಎಫ್.ಎ. ಸಂಖ್ಯೆ: 9110/2009 ಇದರೊಂದಿಗೆ ಇತರೆ, ದಿನಾಂಕ: 3ನೇ ಮಾರ್ಚ್, 2014.

ಅಪೀಲುದಾರರ ಪರ : ಶ್ರೀ ಎಂ.ಆರ್.ಕುಮಾರ ಸ್ವಾಮಿ – ವಕೀಲರು;
2ನೇ ಪ್ರತ್ಯಪೀಲುದಾರರ ಪರ : ಶ್ರೀ ಬಿ.ಸಿ.ಸೀತಾರಾಮ ರಾವ್ – ವಕೀಲರು;
1ನೇ ಪ್ರತ್ಯಪೀಲುದಾರರಿಗೆ ಜಾರಿ ಮಾಡಲಾಗಿದೆ ಮತ್ತು ಪ್ರತಿನಿಧಿಸಿರುವುದಿಲ್ಲ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್:**

ಕ್ಷತಿಗೊಳಗಾದ ಕ್ಲೇಮುದಾರ ಮತ್ತು ವಿಮಾದಾರ ಇಬ್ಬರೂ ಕ್ರಮವಾಗಿ ಈ ಎರಡೂ ಅಪೀಲುಗಳನ್ನು, XIIIನೇ ಹೆಚ್ಚುವರಿ ಲಘು ವ್ಯಾಜ್ಯಗಳ ನ್ಯಾಯಾಧೀಶರು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಲಘು ವ್ಯಾಜ್ಯಗಳ ನ್ಯಾಯಾಲಯ, ಬೆಂಗಳೂರು (ಎಸ್.ಸಿ.ಹೆಚ್.–15) (ಸಂಕ್ಷಿಪ್ತವಾಗಿ ನ್ಯಾಯಾಧಿಕರಣ) ಇವರಿಂದ ಎಂ.ವಿ.ಸಿ. ಸಂ. 3903/2007ರಲ್ಲಿ ಮಾಡಿದ, ಪ್ರಶ್ನಿತ ತೀರ್ಪು ಮತ್ತು ಐತೀರ್ಪು ದಿನಾಂಕ 14ನೇ ಆಗಸ್ಟ್ 2009ರ ವಿರುದ್ಧ ನಿರ್ದೇಶಿಸಲಾಗಿದೆ.

2. 10,00,000/– ರೂ.ಗಳ ತನ್ನ ಕ್ಲೇಮಿನ ಬದಲಾಗಿ ತನಗೆ ನೀಡಿದ 2,21,000/– ರೂ.ಗಳ ಪರಿಹಾರವು ಸಾಕಷ್ಟಿಲ್ಲವೆಂಬ ಕಾರಣದ ಮೇಲೆ ಪರಿಹಾರದ ಹೆಚ್ಚಳಕ್ಕಾಗಿ ಕೋರಿ ಕ್ಲೇಮುದಾರನು ಅಪೀಲನ್ನು ದಾಖಲು ಮಾಡಿರುತ್ತಾನೆ. ಐತೀರ್ಪು ಮೊತ್ತದ ನಷ್ಟಭರ್ತಿಯನ್ನು ವಿಮಾದಾರನು ಕೊಡಬೇಕೆಂದು ನಿರ್ದೇಶಿಸಿರುವ ನ್ಯಾಯಾಧಿಕರಣದ ಐತೀರ್ಪು ನ್ಯಾಯಸಮ್ಮತವಲ್ಲವೆಂದು ಮತ್ತು ಅದನ್ನು ರದ್ದುಪಡಿಸಲು ಹೊಣೆಯಾಗುತ್ತದೆಂಬ ಆಧಾರದ ಮೇಲೆ ವಿಮಾದಾರನು ಈ ಅಪೀಲನ್ನು ಸಲ್ಲಿಸಿದ್ದಾನೆ.

3. ಸಂಕ್ಷಿಪ್ತವಾಗಿ ಸಂಗತಿಗಳು ಈ ಮುಂದಿನಂತಿವೆ : ಕ್ಷತಿಗೊಳಗಾದ ಕ್ಲೇಮುದಾರನು, ಮೋಟಾರು ವಾಹನಗಳ ಅಧಿನಿಯಮ, 166ನೇ ಪ್ರಕರಣದ

ಅಡಿಯಲ್ಲಿ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾನೆ, ದಿನಾಂಕ 13.11.2006ರಂದು ಸುಮಾರು ರಾತ್ರಿ 8.00 ಗಂಟೆಯ ಸಮಯದಲ್ಲಿ ನೋಂದಣಿ ಸಂ. ಕೆಎ–05/ 7513ನ್ನು ಹೊಂದಿದ್ದ ಟೆಂಪೋನಲ್ಲಿ ಕ್ಲೀನರ್ ಆಗಿದ್ದು ಪ್ರಯಾಣಿಸುತ್ತಿದ್ದಾಗ, ಸದರಿ ಟೆಂಪೋ ಚಾಲಕನು ಅತಿ ವೇಗದಲ್ಲಿ ಅದನ್ನು ಚಾಲನೆ ಮಾಡುತ್ತಿದ್ದಾಗ, ದುಡುಕಿನ ಮತ್ತು ನಿರ್ಲಕ್ಷ್ಯತೆಯ ಪರಿಣಾಮವಾಗಿ ಟೆಂಪೋ ಮಗುಚಿ ಬಿದ್ದಿದೆ ಮತ್ತು ಟೆಂಪೋ ಚಾಲಕನು ವಿದ್ಯುತ್ ಕಂಬಕ್ಕೆ ವಿರುದ್ಧವಾಗಿ ತನ್ನ ವಾಹವನ್ನು ಢಿಕ್ಕಿ ಹೊಡೆಸಿದರ ಪರಿಣಾಮವಾಗಿ ಕ್ಷತಿಗೊಳಗಾದ ಕ್ಲೇಮುದಾರನಿಗೆ ತೀವ್ರತರ ಗಾಯಗಳು ಉಂಟಾಗಿವೆಯೆಂದು ವಾದಿಸಲಾಗಿದೆ. ಕೂಡಲೇ ಅವನನ್ನು ಪ್ರಥಮ ಚಿಕಿತ್ಸೆಗಾಗಿ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ಸೇರಿಸಲಾಗಿದೆ ಮತ್ತು ಉತ್ತಮ ಚಿಕಿತ್ಸೆಗಾಗಿ ಅವನನ್ನು ನಿಮ್ಹಾನ್ಸ್ ಆಸ್ಪತ್ರೆಗೆ ವರ್ಗಾಯಿಸಲಾಗಿದ್ದು, ಅವನು 13.11.2006ರಿಂದ 18.11.2006ರವರೆಗೆ ಒಳರೋಗಿಯಾಗಿದ್ದಾನೆ ಹಾಗೂ ಮತ್ತೆ ಅವನನ್ನು ಕಿಮ್ಸ್ ಆಸ್ಪತ್ರೆಗೆ ವರ್ಗಾಯಿಸಲಾಗಿದ್ದು, ಅವನನ್ನು 18.11.2006ರಿಂದ 26.12.2006ರವರೆಗೆ ಆಸ್ಪತ್ರೆಗೆ ಸೇರಿಸಲಾಗಿದೆ ಮತ್ತು ಸಾರಿಗೆ, ನರ್ಸಿಂಗ್, ಆಹಾರ ಮತ್ತು ಸೇವಕ ಖರ್ಚುಗಳೂ ಸೇರಿದಂತೆ ವೈದ್ಯಕೀಯ ಮತ್ತು ಇತರೇ ವೆಚ್ಚಗಳ ಸಲವಾಗಿ ಹೆಚ್ಚು ಮೊತ್ತವನ್ನು ಖರ್ಚು ಮಾಡಲಾಗಿದೆ.

4. ಅವನು, ಅಪಘಾತದ ದಿನಾಂಕಕ್ಕೆ ಮುಂಚೆ ದೃಢಕಾಯ ಮತ್ತು ಆರೋಗ್ಯವಾಗಿದ್ದು, ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದು ಪ್ರತಿದಿನ 150/– ರೂ.ಗಳ ಮೊತ್ತವನ್ನು ಗಳಿಸುತ್ತಿದ್ದನೆಂಬುದು ಕ್ಷತಿಗೊಳಗಾದ ಕ್ಲೇಮುದಾರನ ಪ್ರಕರಣವಾಗಿದೆ. ತೀವ್ರತರ ಗಾಯಗಳು ಉಂಟಾದ ಕಾರಣದಿಂದ, ವೈದ್ಯಕೀಯ ಮತ್ತು ಅನುಷಂಗಿಕ ವೆಚ್ಚಗಳಲ್ಲದೇ, ಸಾರಿಗೆ, ನರ್ಸಿಂಗ್, ಆಹಾರ ಮತ್ತು ಸೇವಕ ಖರ್ಚುಗಳ ಸಲುವಾಗಿ ಹೆಚ್ಚು ಮೊತ್ತವನ್ನು ಖರ್ಚು ಮಾಡುವುದರ ಮೂಲಕ ಅವನು ಚಿಕಿತ್ಸೆ ಪಡೆದುಕೊಂಡಿದ್ದಾನೆ. ಆದ್ದರಿಂದ, ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ಸದರಿ ಗಾಯಗಳಿಗಾಗಿ ಅವನಿಗೆ ಯುಕ್ತ ಪರಿಹಾರ ನೀಡಬಹುದು.

5. ಕ್ಷತಿಗೊಳಗಾದ ಕ್ಲೇಮುದಾರನು ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದು, 14ನೇ ಆಗಸ್ಟ್, 2009ರಂದು ನ್ಯಾಯಾಧಿಕರಣದ ಮುಂದೆ ಪರಿಗಣನೆಗಾಗಿ ಬಂದಿದೆ. ನ್ಯಾಯಾಧಿಕರಣವು, ದಾಖಲೆ ಮೇಲೆ ಲಭ್ಯವಿರುವ ಸುಸಂಬದ್ಧ ಸಾಮಗ್ರಿಯನ್ನು ಪರಿಗಣಿಸಿದ ತರುವಾಯ, ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಗುಣಾವಗುಣ ವಿವೇಚನೆಯ ತರುವಾಯ, ಕ್ಲೇಮು ಅರ್ಜಿಯನ್ನು ಪುರಸ್ಕರಿಸಿದ್ದು, ಅರ್ಜಿಯ ದಿನಾಂಕದಿಂದ ಠೇವಣಿಯ ದಿನಾಂಕದವರೆಗೆ, ವಾರ್ಷಿಕ ಶೇಕಡಾ 6ರ ಬಡ್ಡಿಯೊಂದಿಗೆ, ವಿವಿಧ ಶೀರ್ಷಿಕೆಗಳ ಮೇರೆಗೆ 2,21,000/– ರೂ.ಗಳ ಮೊತ್ತವನ್ನು ನೀಡಲಾಗಿದೆ. ನ್ಯಾಯಾಧಿಕರಣ ನೀಡಿದ ಪರಿಹಾರವು, ತಕ್ಕಷ್ಟಿಲ್ಲವೆಂದು ಅದರ ಪ್ರಮಾಣದಿಂದ ಅತೃಪ್ತನಾಗಿದ್ದು, ಕ್ಷತಿಗೊಳಗಾದ ಕ್ಲೇಮುದಾರನು, ಪರಿಹಾರದ ಹೆಚ್ಚಳಕ್ಕಾಗಿ ಅಪೀಲನ್ನು ಸಲ್ಲಿಸಿದ್ದಾನೆ ಮತ್ತು ವಿಮಾದಾರನ ಮೇಲೆ ಹೊರಿಸಿದ ಹೊಣೆಯಿಂದ ಬಾಧಿತನಾಗಿ, ವಿಮಾದಾರನು ಈ ನ್ಯಾಯಾಲಯದ ಮುಂದೆ ಅಪೀಲಿನಲ್ಲಿರುವಂತೆ, ಸದರಿ ನಿರ್ದೇಶನವನ್ನು ರದ್ದುಪಡಿಸುವಂತೆ ಕೋರಿದ್ದಾನೆ.

6. ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ, ಕ್ಷತಿಗೊಳಗಾದ ಕ್ಲೇಮುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ಅಹವಾಲನ್ನು ಗಣನೀಯ ಸಮಯದ ಅವಧಿಯವರೆಗೆ ನಾನು ಆಲಿಸಿದ್ದೇನೆ.

7. ಕ್ಷತಿಗೊಳಗಾದ ಕ್ಲೇಮುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಎಂ.ಆರ್.ಕುಮಾರ ಸ್ವಾಮಿಯವರು, ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ತೀವ್ರತರ ಗಾಯಗಳ ಕಾರಣದಿಂದ ಉಂಟಾದ ಅಂಗವೈಕಲ್ಯಕ್ಕಾಗಿ ಯಾವುದೇ ನಷ್ಟಪರಿಹಾರ ನೀಡಿರುವುದಿಲ್ಲ. ಗಾಯ, ನೋವು ಮತ್ತು ಯಾತನೆಗಳು, ಚಿಕಿತ್ಸೆಯ ಅವಧಿಯಲ್ಲಿನ ಆದಾಯದ ನಷ್ಟದ ಸಲುವಾಗಿ ಯುಕ್ತ ಪರಿಹಾರ ನೀಡದೆ ನ್ಯಾಯಾಧಿಕರಣ ಒಟ್ಟಾರೆಯಾಗಿ ತಪ್ಪು ಮಾಡಿದೆಯೆಂದು ಪ್ರಾರಂಭದಿಂದಲೂ ವಾದವನ್ನು ಮಂಡಿಸಿದ್ದಾರೆ. ಆದ್ದರಿಂದ, ನ್ಯಾಯಾಧಿಕರಣ ನೀಡಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು, ಪರಿಹಾರವನ್ನು ಯುಕ್ತವಾಗಿ ಹೆಚ್ಚಿಸುವ ಮೂಲಕ ಮಾರ್ಪಡಿಸಬೇಕೆಂದು ನಿವೇದಿಸಿದ್ದಾರೆ. ಸದರಿ ನಿವೇದನೆಯನ್ನು

ರುಜುವಾತುಪಡಿಸುವ ಸಲುವಾಗಿ, ಆತನು ಮುಖ್ಯಾಂಶಗಳನ್ನು ಈ ಮುಂದಿನಂತೆ ನಿವೇದಿಸಿದ್ದಾನೆ, ರಸ್ತೆ ಅಪಘಾತದಲ್ಲಿ ತೀವ್ರತರವಾದ ಗಾಯಗಳು ಉಂಟಾದ ಕಾರಣಗಳಿಂದಾಗಿ, ಗಾಯಾಳು ಕ್ಲೇಮುದಾರನು ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆ ಆಸ್ಪತ್ರೆಗಳಲ್ಲಿ ಸುಮಾರು 45 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾನೆ. ತನ್ನ ವಾದದ ಸಮರ್ಥನೆಗಾಗಿ, ಸಂಪೂರ್ಣವಾಗಿ ದೇಹದಲ್ಲಿ ಶೇಕಡಾ 33ರಷ್ಟು ಅಂಗವೈಕಲ್ಯ ಉಂಟಾಗಿದೆಯೆಂಬ ನಿರ್ಧರಣೆಯನ್ನು ನೀಡಿರುವ ಪ್ರಾ.ಸಾ.2 ವೈದ್ಯರು ಪರೀಕ್ಷಿಸಿದ್ದಾರೆ. ಆದರೆ, ಅಂಗವೈಕಲ್ಯವನ್ನು ನಿರ್ಧರಿಸುವುದಕ್ಕೆ ಸದರಿ ಸಾಕ್ಷ್ಯದಲ್ಲಿನ ವ್ಯಕ್ತಿಯು ಸಕ್ಷಮನಾಗಿರುವುದಿಲ್ಲವೆಂಬ ಆಧಾರದ ಮೇಲೆ ಯಾವುದೇ ಸಮರ್ಥನೆಯಿಲ್ಲದೆ, ಇದನ್ನು ನ್ಯಾಯಾಧಿಕರಣವು ಅಂಗೀಕರಿಸಿರುವುದಿಲ್ಲ ಮತ್ತು ಆತನಿಗೆ ತಲೆಗೆ ಗಾಯ ಆಗಿದ್ದಲ್ಲಿ ಗಾಯಾಳು ಕ್ಲೇಮುದಾರನು ನರರೋಗತಜ್ಞರ ಬಳಿ ಕಡ್ಡಾಯವಾಗಿ ತಪಾಸಣೆಗೆ ಒಳಗಾಗಬೇಕು. ಆದುದರಿಂದ, ಸಂಪೂರ್ಣವಾಗಿ ದೇಹದ ಅಂಗವೈಕಲ್ಯತೆಯನ್ನು ನಿರ್ಧರಿಸಿದ ತರುವಾಯ ಸೂಕ್ತವಾಗಿ ಪರಿಹಾರವನ್ನು ಹೆಚ್ಚಿಸಬೇಕೆಂದು ಆತನು ನಿವೇದಿಸಿಕೊಂಡಿದ್ದಾನೆ.

ಐತೀರ್ಪಿನ ನಷ್ಟಭರ್ತಿಗೆ, ವಿಮಾದಾರನು ಹೊಣೆಗಾರನಾಗಿರುವುದಿಲ್ಲವೆಂದು ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ವಾದಕ್ಕೆ ಸಂಬಂಧಪಟ್ಟಂತೆ, ಆ ಸಂಗತಿಯು, ಪ್ರಶ್ನಿತ ವಾಹನವು ವಿಮಾದಾರನೊಂದಿಗೆ ವಿಮೆ ಮಾಡಲಾಗಿದೆ ಮತ್ತು ಅದು ಜಾರಿಯಲ್ಲಿದ್ದು, ವಿವಾದವಾಗಿರುವುದಿಲ್ಲ ಮತ್ತು ತನಿಖೆ ಮಾಡಿದ ತರುವಾಯ ಪೊಲೀಸರು, ಸದರಿ ವಾಹನದ ಚಾಲಕನ ವಿರುದ್ಧ ಎಫ್.ಐ.ಆರ್.ನ್ನು ದಾಖಲಿಸಿದ್ದಾರೆ. ಇದಲ್ಲದೇ ಆಪಾದಿತ ವಾಹನದ ಚಾಲಕ ಮತ್ತು ಮಾಲೀಕನನ್ನು ವಿಚಾರಣೆ ಮಾಡದೇ, ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ತೀವ್ರತರ ಗಾಯಗಳ ಕಾರಣದಿಂದ ಕ್ಷತಿಗೊಳಗಾಗಿ ಕ್ಲೇಮುದಾರನ ನಷ್ಟಪರಿಹಾರದ ಕಾನೂನುಸಮ್ಮತ ಹಕ್ಕು ಹೊಂದಿರುವಿಕೆಯನ್ನು ತೆಗೆದುಕೊಳ್ಳಲಾಗುವದಿಲ್ಲವೆಂದು ಅವರು ನಿವೇದಿಸಿದ್ದಾರೆ. ಆದ್ದರಿಂದ, ವಿಮಾದಾರನು ಐತೀರ್ಪಿನ ನಷ್ಟಭರ್ತಿಗೆ ಹೊಣೆಗಾರನಾಗಿರುವನೆಂಬ ನಿರ್ಣಯವನ್ನು ನೀಡಿ ನಿಶಾನೆ ಪಿ.1ರಿಂದ ಪಿ.6ರಲ್ಲಿ ತೋರಿಸಿದ ದಸ್ತಾವೇಜು ಜೊತೆ ಪಿ.ಡಬ್ಲ್ಯೂ.1ರ ಮೌಖಿಕ

ಸಾಕ್ಷ್ಯವನ್ನು ಪುರಸ್ಕರಿಸಿ ನ್ಯಾಯಾಧಿಕರಣವು ನೀಡಿರುವ ಐತೀರ್ಪು ನ್ಯಾಯಸಮ್ಮತವಾಗಿದೆಯೆಂದು ನಿವೇದಿಸಿಕೊಂಡಿದ್ದಾರೆ. ಹಾಗಾಗಿ, ಹೊಣೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಹಸ್ತಕ್ಷೇಪ ಮಾಡುವುದು ಅನಾವಶ್ಯಕವಾಗಿದೆ.

8. ಇದಕ್ಕೆ ವಿರುದ್ಧವಾಗಿ, ಆಪಾದಿತ ವಾಹನದ ಮಾಲೀಕ ಮತ್ತು ವಿಮಾದಾರನ ಮೇಲೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ವಿಮಾದಾರನ ಮೇಲೆ ಹೊಣೆಯನ್ನು ಹೊರಿಸಿದ ಅದರ ತೀರ್ಪಿನ ಪ್ಯಾರಾಗ್ರಾಫ್–15ರಲ್ಲಿ ನ್ಯಾಯಾಧಿಕರಣ ನೀಡಿದ ಕಾರಣದಿಂದ, ಅದನ್ನು ಸಮರ್ಥಿಸಿಕೊಳ್ಳಲಾಗದು ಮತ್ತು ಹೊಣೆಯನ್ನು ಪ್ರಾರಂಭದಲ್ಲಿಯೇ ರದ್ದುಪಡಿಸಬಹುದಾಗಿದೆಯೆಂದು ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯಾದ ಶ್ರೀ ಬಿ.ಸಿ.ಸೀತಾರಾಮರಾವ್‌ರವರು ಭಾವಾವೇಶದಿಂದ ನಿವೇದಿಸಿದ್ದಾರೆ. ಅದನ್ನು ರುಜುವಾತುಪಡಿಸಲು ಅವರು ಮುಖ್ಯಾಂಶಗಳನ್ನು ಈ ಮುಂದಿನಂತೆ ನಿವೇದಿಸಿದ್ದಾರೆ. ಪಿ.ಡಬ್ಲ್ಯೂ.1 ಸಾಕ್ಷ್ಯವನ್ನು, ಸದರಿ ಸಾಕ್ಷಿಗಳು, ತನ್ನ ಪಾಟೀಸವಾಲಿನಲ್ಲಿ, ಅಪಘಾತದ ದಿನಾಂಕದಂದು, ಟೆಂಪೋವಿನ ಚಾಲಕ ಮತ್ತು ಕ್ಲೀನರ್ ಆಗಿದ್ದಾರೆ ಹಾಗೂ ಚಾಲಕನ ಹೆಸರನ್ನು ಅವನು ತಿಳಿಸಿರುವುದಿಲ್ಲ ಮತ್ತು ಅವನ ಸ್ವಂತ ಗ್ರಾಮ ಚೆನ್ನಪಟ್ಟಣವಾಗಿದೆ. ಬೆಂಗಳೂರಿಗೆ ಬರುವಾಗ ಬ್ರಾಹ್ಮಣಿಪುರದಲ್ಲಿ ಅವನು ಟೆಂಪೋ ಹತ್ತಿದ್ದಾನೆ ಮತ್ತು ಅವನು ಕ್ಲೀನರ್ ಆಗಿ ಕಾರ್ಯನಿರ್ವಹಿಸುತ್ತಿದ್ದನೆಂಬುದನ್ನು ತೋರಿಸುವ ದಾಖಲೆ ಇರುವುದಿಲ್ಲ ಹಾಗೂ ಕೃಷಿಕನಾಗಿದ್ದಾನೆಂದು ಅವನು ಪೊಲೀಸ್ ಅಧಿಕಾರಿಯ ಮುಂದೆ ಹೇಳಿದ್ದಾನೆಂದು ಅವನು ಮುಂದುವರೆದು ಹೇಳಿದ್ದಾನೆ. ಸ್ವತಃ ಪಿ.ಡಬ್ಲ್ಯೂ.1 ತಾನಾಗಿಯೇ ಮುಚ್ಚುಮರೆಯಿಲ್ಲದೇ ಒಪ್ಪಿಕೊಂಡಿರುವುದು, ಆಪಾದಿತ ವಾಹನ ಮಾಲೀಕನ ಮೇಲೆ ಹೊಣೆಯನ್ನು ಹೊರಿಸಲು ಸಾಕಷ್ಟಾಗುತ್ತದೆ. ಮಾಲೀಕನ ಹೆಸರಿನಲ್ಲಿ ನೀಡಿದ ವಿಮಾಪಾಲಿಸಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಒಟ್ಟಾರೆಯಾಗಿ ಉಲ್ಲಂಘಿಸಲಾಗಿದೆ. ಆದ್ದರಿಂದ, ಐತೀರ್ಪಿನ ನಷ್ಟಭರ್ತಿಗೆ ಹೊಣೆಯನ್ನು ವಿಮಾದಾರ ಮೇಲೆ ಹೊರಿಸಿ ನ್ಯಾಯಾಧಿಕರಣ ನೀಡಿದ ನಿರ್ದೇಶನವನ್ನು ರದ್ದುಪಡಿಸಿ, ಆಪಾದಿತ ವಾಹನ ಮಾಲೀಕನ ಮೇಲೆ ಅದನ್ನು ಹೊರಿಸಬೇಕೆಂದು ಅವರು ನಿವೇದಿಸಿಕೊಂಡಿದ್ದಾರೆ.

9. ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ವಾದದ ಸುನಾವಣೆಯ ತರುವಾಯ ಮತ್ತು ದಾಖಲೆ ಮೇಲೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಮರುಗುಣಾವಗುಣಗಳ ತರುವಾಯ, ಈ ಎರಡೂ ಅಪೀಲುಗಳಲ್ಲಿರುವಂತೆ ನನ್ನ ಪರಿಗಣನೆಗಾಗಿ ಈ ಅಂಶಗಳು ಉದ್ಭವಿಸುತ್ತಿವೆ :

i) **ಐತೀರ್ಪು ಮೊತ್ತದ ನಷ್ಟಭರ್ತಿ ತುಂಬಿಕೊಡಲು ವಿಮಾದಾರನಿಗೆ ನಿರ್ದೇಶಿಸಿರುವ ನ್ಯಾಯಾಧಿಕರಣದ ನಿರ್ದೇಶನವು ನ್ಯಾಯ ಸಮ್ಮತವಾಗಿದೆಯೇ?**

ii) **ನ್ಯಾಯಾಧಿಕರಣದ ಐತೀರ್ಪು ಪರಿಹಾರದ ಪ್ರಮಾಣ ನ್ಯಾಯಸಮ್ಮತ ಮತ್ತು ಯುಕ್ತವಾಗಿದೆಯೇ?**

iii) **ಐತೀರ್ಪಿನ ನಷ್ಟಭರ್ತಿಯನ್ನು ತುಂಬಿಕೊಡುವುದಕ್ಕೆ ಮಾಲೀಕನು ಹೊಣೆಗಾರನಾಗಿದ್ದಾನೆಯೇ?**

10. **ಮರು ಅಂಶ–I**: ದಾಖಲೆ ಮೇಲೆ ಲಭ್ಯವಿರುವ ಇಡೀ ಸಾಮಗ್ರಿಯನ್ನು ಗಮನಿಸಿದ ತರುವಾಯ, ಅಪಘಾತ ಸಂಭವಿಸಿರುವುದು ಮತ್ತು ಪರಿಣಾಮರೂಪಿಯಾದ ಗಾಯಗಳು, ಕ್ಷತಿಗೊಳಗಾದ ಕ್ಲೇಮುದಾರನಿಗೆ ಉಂಟಾಗಿರುವುದು ವಿವಾದವಾಗುವುದಿಲ್ಲವೆಂದು ಕಂಡುಬಂದಿದೆ. ಕ್ಷತಿಗೊಳಗಾದ ಕ್ಲೇಮುದಾರನು ಅಪಘಾತಕ್ಕೆ ಮುಂಚೆ ದೃಢಕಾಯ ಮತ್ತು ಆರೋಗ್ಯವಾಗಿದ್ದು, ವಯಸ್ಸು ಸುಮಾರು 23 ವರ್ಷಗಳಾಗಿತ್ತೆಂಬುದು ಸಹ ವಿವಾದವಾಗುವುದಿಲ್ಲ. ಅವನು ಕೃಷಿಕನಾಗಿ ಕಾರ್ಯನಿರ್ವಹಿಸುತ್ತಿದ್ದನೆಂದು ಹೇಳಿದ್ದಾನೆ. ಇದಲ್ಲದೇ, ಆಪಾದಿತನ ವಾಹನದ ಮಾಲೀಕನ ಹೆಸರಿನಲ್ಲಿ ವಿಮಾಪಾಲಿಸಿಯನ್ನು ನೀಡಿರುವುದು ಸಹ ವಿವಾದವಾಗುವುದಿಲ್ಲ. ದಾಖಲೆ ಮೇಲೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಮರು–ಗುಣಾವಗುಣಗಳ ತರುವಾಯ, ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಸರಿಯಾಗಿ ಸೂಚಿಸಿರುವಂತೆ, ಪಿ.ಡಬ್ಲ್ಯೂ.12, ಕ್ಷತಿಗೊಳಗಾಗಿ

ಕ್ಲೇಮುದಾರನು, ಸ್ವತಃ ಟೆಂಪೋನ ಚಾಲಕ ಮತ್ತು ಕ್ಲೀನರ್ ಆಗಿದ್ದಾನೆ ಹಾಗೂ ಬೆಂಗಳೂರಿಗೆ ಬರುವಾಗ ಬ್ರಾಹ್ಮಣಿಪುರದಲ್ಲಿ ಟೆಂಪೋ ಹತ್ತಿದ್ದಾನೆ ಮತ್ತು ಈ ಮುಂಚಿನ ಸಮಯದ ಅಂಶದಲ್ಲಿರುವಂತೆ ಪೊಲೀಸರ ಮುಂದೆ ಹೇಳಿಕೆ ನೀಡುವಾಗ ತನ್ನ ವೃತ್ತಿಯಲ್ಲಿ ಕೃಷಿಕನಾಗಿದ್ದಾನೆಂದು ಅವನು ಹೇಳಿರುವುದನ್ನು ಸಹ ಒಪ್ಪಿಕೊಳ್ಳಲಾಗಿದೆಯೆಂದು ತಪ್ಪು ಕಲ್ಪನೆಗೆ ಅವಕಾಶವಿಲ್ಲದೇ ಹೇಳಲಾಗಿದೆ. ಇದನ್ನು ಮುಚ್ಚುಮರೆಯಿಲ್ಲದೇ ಒಪ್ಪಿಕೊಂಡಿರುವ ಸಂಗತಿ, ದಾಖಲೆಗಳಲ್ಲಿ ಲಭ್ಯವಿರುವಾಗ ಐತೀರ್ಪಿನ ನಷ್ಟಭರ್ತಿಯನ್ನು ತುಂಬಿಕೊಡಲು ವಿಮಾದಾರನು ಹೊಣೆಗಾರನಾಗಿದ್ದಾನೆಂದು ನ್ಯಾಯಾಧಿಕರಣ ನಿರ್ಣಯ ನೀಡಿರುವುದು ಸೂಕ್ತವಲ್ಲ. ಕ್ಷತಿಗೊಳಗಾದ ಕ್ಲೇಮುದಾರ/ಪಿ.ಡಬ್ಲ್ಯೂ.1 ಅನಧಿಕೃತ ಪ್ರಯಾಣಿಕನಾಗಿ ಪ್ರಶ್ನಿತ ವಾಹನದಲ್ಲಿ ಪ್ರಯಾಣಿಸುತ್ತಿದ್ದನೇ ಹೊರತು ಕ್ಲೀನರ್ ಆಗಿ ಅಲ್ಲವೆಂಬ ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿ ಅದು ರುಜುವಾತುಪಡಿಸಿರುವುದರಿಂದ ಐತೀರ್ಪಿನ ನಷ್ಟಭರ್ತಿಯನ್ನು ತುಂಬಿಕೊಡಲು ವಿಮಾದಾರನಿಗೆ ನ್ಯಾಯಾಧಿಕರಣ ನೀಡಿದ ಸದರಿ ನಿರ್ಣಯ ಮತ್ತು ನಿರ್ದೇಶನವು ರದ್ದುಪಡಿಸಲು ಅರ್ಹವಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ, 1ನೇ ಅಂಶದ ಬಗ್ಗೆ ನನ್ನ ಉತ್ತರ ನಕಾರಾತ್ಮಕವಾಗಿದೆ ಮತ್ತು ಐತೀರ್ಪಿನ ನಷ್ಟಭರ್ತಿಯನ್ನು ತುಂಬಿಕೊಡಲು ವಿಮಾದಾರನಿಗೆ ನ್ಯಾಯಾಧಿಕರಣ ನೀಡಿದ ನಿರ್ದೇಶನವನ್ನು ರದ್ದುಪಡಿಸಲಾಗಿದೆ.

11. **ಮರು ಅಂಶ II**: ನ್ಯಾಯಾಧಿಕರಣ ನೀಡಿದ ಪರಿಹಾರದ ಪ್ರಮಾಣಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ನಾನು 11ನೇ ಅಂಶದ ಬಗ್ಗೆ ಸಹ ನಕಾರಾತ್ಮಕವಾಗಿ ಉತ್ತರಿಸಿದ್ದೇನೆ, ನ್ಯಾಯಾಧಿಕರಣ ನೀಡಿದ ಪರಿಹಾರವು, ಅತ್ಯಂತ ಕಡಿಮೆಯಾಗಿದೆ ಮತ್ತು ವೈದ್ಯರು ನಿರ್ಧರಿಸಿದ ಅಂಗವೈಕಲ್ಯತೆ ಉಂಟಾದ ಗಾಯಗಳ ಸ್ವರೂಪ, ವಯಸ್ಸು, ವೃತ್ತಿ, ಚಿಕಿತ್ಸೆಯ ಸ್ವರೂಪ ಮತ್ತು ಅವಧಿಯನ್ನು ಪರಿಗಣನೆಗೆ ತೆಗೆದುಕೊಂಡು ನಷ್ಟಪರಿಹಾರವನ್ನು ಹೆಚ್ಚಿಸಬೇಕಾಗಿದೆಯೆಂದು ನನ್ನ ಅಭಿಪ್ರಾಯವಾಗಿದೆ. ದಾಖಲೆ ಮೇಲೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ವಿಮರ್ಶಾತ್ಮಕವಾಗಿ ನಿರ್ಧರಿಸಿದ ತರುವಾಯ, ಸಂಭವಿಸಿದ ಅಪಘಾತ

ಮತ್ತು ಕ್ಷತಿಗೊಳಗಾದ ಕ್ಲೇಮುದಾರನಿಗೆ ಉಂಟಾದ ಗಾಯಗಳ ಪರಿಣಾಮ, ವಿವಾದವಾಗಿಲ್ಲದಿರುವುದನ್ನು ನೋಡಬಹುದಾಗಿದೆ. ಅಪಘಾತದ ದಿನಾಂಕದಂದು ಕ್ಷತಿಗೊಳಗಾದ ಕ್ಲೇಮುದಾರನ ವಯಸ್ಸು ಸುಮಾರು 23 ವರ್ಷಗಳಾಗಿದೆ ಮತ್ತು ಕೂಲಿ–ಕಮ್–ಕೃಷಿಕನಾಗಿ ಕಾರ್ಯನಿರ್ವಹಿಸುತ್ತಿದ್ದನೆಂಬುದು ಸಹ ವಿವಾದವಾಗುವುದಿಲ್ಲ. ಇದಲ್ಲದೇ, ಅವನು, ಮಾಲೀಕನಿಗೆ ಸೇರಿದ ಪ್ರಶ್ನಿತ ಟೆಂಪೋದಲ್ಲಿ ಪ್ರಯಾಣಿಸುತ್ತಿದ್ದನೆಂಬುದು ವಿವಾದವಾಗುವುದಿಲ್ಲ. 2006ನೇ ವರ್ಷದಲ್ಲಿ ಅಪಘಾತವಾಗಿದೆ. ಆದ್ದರಿಂದ, ವಯಸ್ಸಿನ ವೃತಿ ಮತ್ತು ಅಪಘಾತದ ವರ್ಷಕ್ಕೆ ಸಂಬಂದಿಸಿದಂತೆ, ಪ್ರತಿ ತಿಂಗಳು 3,000/– ರೂ.ಗಳಂತೆ ನ್ಯಾಯಾಧಿಕರಣ ನಿರ್ಧರಿಸಿದ ಆದಾಯವು ನ್ಯಾಯಸಮ್ಮತವಾಗಿದೆ ಮತ್ತು ಯುಕ್ತವಾಗಿದೆ. ಹಾಗೂ ಅದನ್ನು ನಾನು ಅಂಗೀಕರಿಸಿದ್ದು, ನ್ಯಾಯೋದ್ದೇಶವನ್ನು ನೆರವೇರಿಸಲಾಗಿದೆ. ಇದಲ್ಲದೇ ರಸ್ತೆ ಸಂಚಾರ ಅಪಘಾತದ ಕಾರಣದಿಂದ ಕ್ಷತಿಗೊಳಗಾದ ಕ್ಲೇಮುದಾರನಿಗೆ ತೀವ್ರತರ ಗಾಯಗಳು ಮುಂತಾದವು ಉಂಟಾಗಿದ್ದು ತಲೆಬುರುಡೆಯ ಎಡಭಾಗದ ಪ್ರಾನಸೋ, ತಡೆಬುರುಡೆಯ ಎಡಭಾಗದ ಮೇಲೆ 1 ಸೆಂ.ಮೀ.ನಿಂದ 4 ಸೆಂ.ಮೀ.ವರೆಗೆ ಹರಿತವಾದ ಗಾಯವಾಗಿದ್ದು, ತಲೆಗೆ ಗಂಭೀರ ಗಾಯವಾಗಿದ್ದು, ತಲೆಬುರುಡೆಯ ಎಡಭಾಗದ ಮುಂದಿನ ಟೆಂಪೋರಲ್ ಅಕ್ಯೋಟ್ಸಬ್ ಡ್ಯೂರಲ್ ರಕ್ತಸ್ರಾವವಾಗಿ ತಲೆಬುರುಡೆಯ ಎಡಭಾಗದ ಎಲುಬು ಮುರಿದು ಕೆಳಕ್ಕಿಳಿದಿದೆ ಮತ್ತು ಇತರೇ ಗಾಯಗಳು ಹಾಗೂ ವಿವಿಧ ಆಸ್ಪತ್ರೆಗಳಲ್ಲಿ 45 ದಿನಗಳಿಗಿಂತ ಹೆಚ್ಚು ಅವಧಿಯಲ್ಲಿ ಚಿಕಿತ್ಸೆ ಪಡೆದುಕೊಳ್ಳಲಾಗಿದೆಯೆಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ವೈದ್ಯರು, ಶೇಕಡ 75ರಷ್ಟು ಜ್ಞಾಪಕಶಕ್ತಿ ದುರ್ಬಲಗೊಂಡಿದ್ದು, ಶೇ.50ರಷ್ಟು ಪಾರ್ಶ್ವವಾಯು ಪೀಡಿತವಾಗಿದ್ದು ಮತ್ತು ಶೇಕಡಾ 33ರಷ್ಟು ಇಡೀ ದೇಹದ ಅಂಗವೈಕಲ್ಯತೆಯನ್ನು ನಿರ್ಧರಿಸಿದ್ದಾರೆ. ಇದಲ್ಲದೇ, ಕ್ಷತಿಗೊಳಗಾದ ಕ್ಲೇಮುದಾರನು ವಿಶ್ರಾಂತಿ ಪಡೆದುಕೊಂಡಿದ್ದಾನೆ ಮತ್ತು ಆರು ತಿಂಗಳಿಗಿಂತ ಕಡಿಮೆ ಇಲ್ಲದ ಅವಧಿಯಲ್ಲಿ ಚಿಕಿತ್ಸೆಯನ್ನೂ ಪಡೆದುಕೊಂಡಿದ್ದಾನೆ. ಚಿಕಿತ್ಸೆಯ ಅವಧಿಯಲ್ಲಿ ಮುಂದುವರೆದ ಚಿಕಿತ್ಸೆ ಪಡೆದುಕೊಳ್ಳುವಾಗ ಅವನು ಹೇಳಿಕೊಳ್ಳಲಾಗದ ಬಹಳಷ್ಟು ನೋವು ಮತ್ತು ದಾರುಣವಾದ ಯಾತನೆಗೆ ಒಳಗಾಗಿದ್ದಾನೆ ಹಾಗೂ ಸಾರಿಗೆ, ನರ್ಸಿಂಗ್, ಆಹಾರ ಮತ್ತು ಸೇವಕ ಖರ್ಚುಗಳ ಸಲುವಾಗಿ ಸಾಕಷ್ಟು ಮೊತ್ತವನ್ನು ಸಹ

ಖರ್ಚು ಮಾಡಿದ್ದಾನೆ. ಇದಲ್ಲದೇ, ಕ್ಷತಿಗೊಳಗಾದ ಕ್ಲೇಮುದಾರನ ವಯಸ್ಸು ಕೇವಲ 23 ವರ್ಷಗಳು ಮಾತ್ರವಾಗಿದ್ದು, ತನ್ನ ಜೀವನದ ಉಳಿದಿರುವ ಭಾಗವು ಇಡೀ ದೇಹದ ಅಂಗವೈಕಲ್ಯತೆಯೊಂದಿಗೆ ಕಳೆಯಬೇಕಿದೆ ಮತ್ತು ಅವನು ಮುಂಚೆ ಮಾಡಿದಂತೆ ತನ್ನ ಸಾಮಾನ್ಯ ಕೆಲಸಗಳನ್ನು ತಾನೇ ಮಾಡಿಕೊಳ್ಳಲಾಗದು. ಆದ್ದರಿಂದ, ಉಂಟಾದ ಗಾಯಗಳ ಸ್ವರೂಪ, ವಯಸ್ಸು ಮತ್ತು ಚಿಕಿತ್ಸೆಯ ಸ್ವರೂಪ ಮತ್ತು ಅವಧಿ, ಮತ್ತು ಇಡೀ ದೇಹದ ಅಂಗವೈಕಲ್ಯತೆ ಮುಂತಾದವಕ್ಕೆ ಸಂಬಂಧಿಸಿದಂತೆ ನಿರ್ಧರಿಸಿ, ನೋವು ಮತ್ತು ಯಾತನೆಗಳ ಸಲುವಾಗಿ 35,000/– ರೂ.ಗಳ ಬದಲಿಗೆ 50,000/–ರೂ.ಗಳು, ಸೌಕರ್ಯಗಳ ನಷ್ಟ, ಅಸೌಕರ್ಯ ಮತ್ತು ಅಸಂತೋಷದ ಸಲುವಾಗಿ 10,000/–ರೂ.ಗಳ ಬದಲಿಗೆ 40,000/–ರೂ.ಗಳು; ನ್ಯಾಯಾಧಿಕರಣ ನೀಡಿದ 6,000/– ರೂ.ಗಳ ಬದಲಿಗೆ ಆರು ತಿಂಗಳ ಅವಧಿಗಾಗಿ ಪ್ರತಿ ತಿಂಗಳು 3,000/– ರೂ.ಗಳ ದರದಂತೆ ಚಿಕಿತ್ಸೆಯ ಅವಧಿಯ ಸಮಯದಲ್ಲಿ ಆದಾಯದ ನಷ್ಟದ ಸಲುವಾಗಿ 18,000/– ರೂ.ಗಳ ಮೊತ್ತವನ್ನು ನಾನು ನೀಡಿದ್ದೇನೆ.

12. ಆದಾಗ್ಯೂ, ನ್ಯಾಯಾಧಿಕರಣ ದಾಖಲೆ ಮೇಲೆ ಲಭ್ಯವಿರುವ ಮೌಖಿಕ ದಸ್ತಾವೇಜು ಸಾಕ್ಷ್ಯವನ್ನು ವಿಮರ್ಶಾತ್ಮಕವಾಗಿ ನಿರ್ಧರಿಸಿದ ತರುವಾಯ ಮತ್ತು ವಯಸ್ಸು, ವೃತ್ತಿ, ಅಪಘಾತದ ವರ್ಷ, ಚಿಕಿತ್ಸೆಯ ಸ್ವರೂಪ ಮತ್ತು ಅವಧಿ ಇತ್ಯಾದಿಯನ್ನು ಪರಿಗಣಿಸಿದ್ದು, ವೈದ್ಯಕೀಯ ಬಿಲ್ಲುಗಳು ಮತ್ತು ಸೂಚಿಸಿದ ಔಷಧಿಗಳ ಪ್ರಕಾರ ವೈದ್ಯಕೀಯ ವೆಚ್ಚಗಳ ಸಲುವಾಗಿ 1,50,000/– ರೂ.ಗಳು ಮತ್ತು ಒಳರೋಗಿಯಾಗಿ ದಿನಗಳ ಸಂಖ್ಯೆ ಇತ್ಯಾದಿಯನ್ನು ಪರಿಗಣಿಸಿದ್ದು, ಸಾರಿಗೆ, ನರ್ಸಿಂಗ್, ಆಹಾರ ಮತ್ತು ಸೇವಕ ಖರ್ಚುಗಳ ಸಲುವಾಗಿ 20,000/– ರೂ.ಗಳ ಮೊತ್ತ ನೀಡಿರುವುದನ್ನು ಸಮರ್ಥಿಸಿರುವುದು ಸೂಕ್ತವಾಗಿದೆ. ಆದ್ದರಿಂದ, ಅದರಲ್ಲಿ ಹಸ್ತಕ್ಷೇಪ ಮಾಡಲು ಬರುವುದಿಲ್ಲ.

13. ಹೀಗಾಗಿ, ಒಟ್ಟು ಪರಿಹಾರವು ನ್ಯಾಯಾಧಿಕರಣ ನೀಡಿದ 2,21,000/– ರೂ.ಗಳ ಬದಲಿಗೆ 2,78,000/– ರೂ.ಗಳಿಗೆ ಬರುತ್ತದೆ. ಅರ್ಜಿಯ ದಿನಾಂಕದಿಂದ

ಬಿಡುಗಡೆಯ ದಿನಾಂಕದವರಗೆ ವಾರ್ಷಿಕ ಶೇಕಡಾ 6ರ ಬಡ್ಡಿಯೊಂದಿಗೆ, 57,000/– ರೂ.ಗಳ ಮೊತ್ತದ ಪರಿಹಾರವನ್ನು ಹೆಚ್ಚಳ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಅದು ಮುಂದಿನಂತಿದೆ :

| | |
|---|---|
| ನೋವು ಮತ್ತು ಯಾತನೆಗಳ ಸಲುವಾಗಿ | 50,000/– ರೂ.ಗಳು |
| ಸೌಕರ್ಯಗಳು ಮತ್ತು ಅಂಗವೈಕಲ್ಯತೆಯ ಕಾರಣದಿಂದ ಜೀವನದಲ್ಲಿನ ಅನುಭೋಗದ ನಷ್ಟದ ಸಲುವಾಗಿ | 40,000/– ರೂ.ಗಳು |
| ವೈದ್ಯಕೀಯ ವೆಚ್ಚಗಳ ಸಲುವಾಗಿ | 1,50,000/– ರೂ.ಗಳು |
| ಸಾರಿಗೆ, ನರ್ಸಿಂಗ್, ಆಹಾರ ಮತ್ತು ಸೇವಕ ಖರ್ಚುಗಳ ಸಲುವಾಗಿ | 20,000/– ರೂ.ಗಳು |
| ಚಿಕಿತ್ಸೆಯ ಅವಧಿಯ ಸಮಯದಲ್ಲಿ ಗಳಿಕೆಯ ನಷ್ಟದ ಸಲುವಾಗಿ | 18,000/– ರೂ.ಗಳು |
| **ಒಟ್ಟು** | **2,78,000/– ರೂ.ಗಳು** |

14. **ಮರು ಅಂಶ–III** : ಹೊಣೆಯನ್ನು ಹೊರಿಸುವುದಕ್ಕೆ ಸಂಬಂಧಪಟ್ಟಂತೆ, ವಿಮಾದಾರನಿಗೆ ನಷ್ಟಭರ್ತಿಯನ್ನು ತುಂಬಿಕೊಡಲು ಐತೀರ್ಪು ನೀಡಿ ನಿರ್ದೇಶಿಸಿ ನ್ಯಾಯಾಧಿಕರಣ ತಪ್ಪು ಮಾಡಿದ್ದು, ಅವನ ಕ್ಲೀನರ್ ಮತ್ತು ಚಾಲಕನೊಂದಿಗೆ ಟೆಂಪೋನಲ್ಲಿ ಪ್ರಯಾಣಿಸುತ್ತಿದ್ದು, ಅವನು ಚಾಲಕನ ಹೆಸರನ್ನು ಸಹಾ ತಿಳಿಸಿಲ್ಲವೆಂದು ತನ್ನ ಪಾಟೀಸವಾಲಿನಲ್ಲಿ ಕ್ಷತಿಗೊಳಗಾದ ಕ್ಲೇಮುದಾರ/ಪಿ.ಡಬ್ಲ್ಯೂ1 ಸ್ಪಷ್ಟವಾದ ಹೇಳಿಕೆಯನ್ನು ನೀಡಿದ್ದಾನೆ. ಇದಲ್ಲದೇ, ಪೊಲೀಸರ ಮುಂದೆ ಅವನು, ತನ್ನ ವೃತ್ತಿ ಕೃಷಿಯಾಗಿತ್ತೆಂದು ತಪ್ಪು ಕಲ್ಪನೆಗೆ ಅವಕಾಶವಿಲ್ಲದೇ ಹೇಳಿದ್ದಾನೆ. ಈ ಹೇಳಿಕೆಯನ್ನು ಈ ಮುಂಚಿನ ಸಮಯದಲ್ಲೇ ಸಾಕ್ಷಿದಾರನಿಂದ ನೀಡಲಾಗಿದೆ ಮತ್ತು ಹೀಗಾಗಿ ಇದನ್ನು ನಂಬದೇ ಇರಲಾಗದು. ಇದಲ್ಲದೇ, ಅವನು ಬೆಂಗಳೂರಿಗೆ

ಬರುವಾಗ ಬ್ರಾಹ್ಮಣಿಪುರದಲ್ಲಿ ಟೆಂಪೋ ಹತ್ತಿದ್ದಾನೆಂದು ಅವನು ಹೇಳಿದ್ದಾನೆ. ಆದ್ದರಿಂದ, ಬಹಳಷ್ಟು ಮೂಲ ದಾಖಲೆಗಳಲ್ಲಿರುವಂತೆ ಈ ಹೇಳಿಕೆಯು ಸ್ಪಷ್ಟವಾಗಿರುವಾಗ, ನ್ಯಾಯಾಧಿಕರಣ ಅದನ್ನು ನಂಬದೇ ಇರಲಾಗದು. ಮುಂದುವರೆದ ಮಹತ್ವದ ಅಂಶವೇನೆಂದರೆ, ಅವರು, ಟೆಂಪೋ ಮಾಲೀಕ ಅಥವಾ ಚಾಲಕನನ್ನಾಗಲೀ ಪರೀಕ್ಷಿಸಿರುವುದಿಲ್ಲ. ಸಮನ್ಸ್ ಜಾರಿಯ ತರುವಾಯ ಏಕಪಕ್ಷೀಯವಾಗಿ ಉಳಿದುಕೊಂಡಿದ್ದಾನೆ ಮತ್ತು ಹಾಜರಾಗಿರುವುದಿಲ್ಲ ಅಥವಾ ಸಾಕ್ಷಿದಾರ ಪಟ್ಟಿಗೆ ಪ್ರವೇಶಿಸಿರುವುದಿಲ್ಲ. ಇದಲ್ಲದೆ ವಿಮಾದಾರನು ಕ್ಷತಿಗೊಳಗಾದ ಕ್ಲೇಮುದಾರನು, ಅನಧಿಕೃತ ಪ್ರಯಾಣಿಕನಾಗಿ ಪ್ರಶ್ನಿಸಿದ ಟೆಂಪೋವಿನಲ್ಲಿ ಪ್ರಯಾಣಿಸುತ್ತಿದ್ದು, ಕ್ಲೀನರ್ ಆಗಿರುವುದಿಲ್ಲವೆಂದು ನ್ಯಾಯಾಧಿಕರಣದ ಮುಂದೆ ದಾಖಲಿಸಿದ ಆಕ್ಷೇಪಣಾ ಹೇಳಿಕೆಯಲ್ಲಿ ನಿರ್ದಿಷ್ಟ ನಿಲುವನ್ನು ತೆಗೆದುಕೊಂಡಿದ್ದಾನೆಂಬುದು ಕಂಡುಬಂದಿದೆ. ಆದರೆ, ಅದನ್ನು ತಡೆಗಟ್ಟುವ ಸಲುವಾಗಿ ಕ್ಷತಿಗೊಳಗಾದ ಕ್ಲೇಮುದಾರ ಅಥವಾ ಮಾಲೀಕನು, ಅವನು ಟೆಂಪೋವಿನಲ್ಲಿ ಕ್ಲೀನರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ನೆಂಬುದನ್ನು ಸಾಬೀತುಗೊಳಿಸಲು ಯಾವುದೇ ನಂಬಲರ್ಹ ದಸ್ತಾವೇಜು ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಆಪಾದಿತ ವಾಹನದ ಮಾಲೀಕನು, ತನ್ನ ಹೆಸರಿನಲ್ಲಿ ವಿಮಾದಾರನಿಂದ ಪಡೆದ ವಿಮಾಪಾಲಿಸಿಯ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದ್ದಾನೆಂಬ ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿ ರುಜುವಾತುಪಡಿಸಲಾಗಿದೆ. ಆದ್ದರಿಂದ, ನಷ್ಟಭರ್ತಿಯನ್ನು ತುಂಬಿಕೊಡಲು ಐತೀರ್ಪನ್ನು ವಿಮಾದಾರನಿಗೆ ನಿರ್ದೇಶನ ನೀಡಿರುವುದನ್ನು ಈ ಮೂಲಕ ರದ್ದುಗೊಳಿಸಲಾಗಿದೆ ಮತ್ತು ಅದನ್ನು ಆಪಾದಿತ ವಾಹನದ ಮಾಲೀಕನ ಮೇಲೆ ಹೊಣೆಯನ್ನು ಹೊರಿಸಲಾಗಿದೆ. ಅದಕ್ಕನುಸಾರವಾಗಿ, ನಾನು IIIನೇ ಅಂಶದ ಉತ್ತರವನ್ನು ದೃಢೀಕರಿಸಿದ್ದು, ಆಪಾದಿತ ವಾಹನದ ಮಾಲೀಕನನ್ನು, ನಷ್ಟಭರ್ತಿಯನ್ನು ತುಂಬಿಕೊಡುವ ಐತೀರ್ಪಿಗೆ ಹೊಣೆಯನ್ನಾಗಿ ಮಾಡಲಾಗಿದೆಯೆಂದು ಎತ್ತಿಹಿಡಿದಿದ್ದೇನೆ.

15. ಈ ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಮೇಲೆ ಹೇಳಿದಂತೆ, ಕ್ಷತಿಗೊಳಗಾದ ಕ್ಲೇಮುದಾರನು ದಾಖಲಿಸಿದ ಅಪೀಲನ್ನು ಭಾಗಶಃ ಅಂಗೀಕರಿಸಲಾಗಿದೆ ಮತ್ತು ವಿಮಾದಾರನು ಸಲ್ಲಿಸಿದ ಅಪೀಲನ್ನು ಅಂಗೀಕರಿಸಲಾಗಿದೆ.

XIIIನೇ ಹೆಚ್ಚುವರಿ ಲಘು ವ್ಯಾಜ್ಯ ನ್ಯಾಯಾಧೀಶರು, ಸದಸ್ಯರು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಲಘುವ್ಯಾಜ್ಯಗಳ ನ್ಯಾಯಾಲಯ, ಬೆಂಗಳೂರು (ಎಸ್.ಸಿ.ಸಿ.ಹೆಚ್) ಇವರು ಎಂ.ವಿ.ಸಿ. ಸಂ. 3903/2007ರಲ್ಲಿ ನೀಡಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪು ದಿನಾಂಕ 14ನೇ ಆಗಸ್ಟ್ 2009ನ್ನು ಈ ಮೂಲಕ ಮಾರ್ಪಡಿಸಲಾಗಿದೆ.

ನ್ಯಾಯಾಧಿಕರಣ, ಐತೀರ್ಪನ್ನು ನೀಡಿ ನಷ್ಟಭರ್ತಿಯನ್ನು ತುಂಬಿಕೊಡಲು ಹೊರಿಸಿದ ಹೊಣೆಯಿಂದ ವಿಮಾದಾರನನ್ನು ವಿಮುಕ್ತಗೊಳಿಸಲಾಗಿದೆ.

ಆಪಾದಿತ ವಾಹನದ ಮಾಲೀಕನು, ನಷ್ಟಭರ್ತಿ ಐತೀರ್ಪಿಗೆ ಹೊಣೆಯಾಗಿದ್ದಾನೆ ಮತ್ತು ಅದಕ್ಕನುಸಾರವಾಗಿ ಅರ್ಜಿಯ ದಿನಾಂಕದಿಂದ ಬಿಡುಗಡೆಯ ದಿನಾಂಕದವರೆಗೆ, ವಾರ್ಷಿಕ ಶೇಕಡಾ 6ರಂತೆ ಬಡ್ಡಿಯೊಂದಿಗೆ ಪರಿಹಾರದ ಹೆಚ್ಚಳ ಸೇರಿದಂತೆ ಐತೀರ್ಪಿನ ಸಂಪೂರ್ಣ ಮೊತ್ತದ ನಷ್ಟಭರ್ತಿಯನ್ನು ತುಂಬಿಕೊಡಲು ನಿರ್ದೇಶಿಸಲಾಗಿದೆ.

ಅರ್ಜಿಯ ದಿನಾಂಕದಿಂದ, ಬಿಡುಗಡೆಯ ದಿನಾಂಕದವರೆಗೆ ವಾರ್ಷಿಕ ಶೇಕಡಾ 6ರಂತೆ ಬಡ್ಡಿಯೊಂದಿಗೆ 2,21,000/– ರೂ.ಗಳಂತೆ ನ್ಯಾಯಾಧಿಕರಣ ನೀಡಿದ ಪರಿಹಾರವನ್ನು 2,78,200/–ರೂ.ಗಳಿಗೆ ಹೆಚ್ಚಿಸಲಾಗಿದೆ.

ಕ್ಷತಿಗೊಳಗಾದ ಕ್ಲೇಮುದಾರನು, ನ್ಯಾಯಾಧಿಕರಣ ನೀಡಿದ ಪರಿಹಾರಕ್ಕೆ ಹೆಚ್ಚುವರಿಯಾಗಿ, ಅರ್ಜಿಯ ದಿನಾಂಕದಿಂದ ಬಿಡುಗಡೆಯ ದಿನಾಂಕದವರೆಗೆ ವಾರ್ಷಿಕ ಶೇ.ಡ 6ರ ಬಡ್ಡಿಯೊಂದಿಗೆ 57,000/–ರೂ.ಗಳ ಮೊತ್ತಕ್ಕೆ ಹಕ್ಕುಳ್ಳವನಾಗಿರುತ್ತಾನೆ.

ಅಂಥ ಠೇವಣಿಯ ಮೇಲೆ, ಇಡೀ ಮೊತ್ತವನ್ನು ಮಾಲೀಕನ ಠೇವಣಿಯಿಂದ ಕ್ಷತಿಗೊಳಗಾದ ಕ್ಲೇಮುದಾರನ ಹೆಸರಿನಲ್ಲಿ ಬಿಡುಗಡೆ ಮಾಡತಕ್ಕದ್ದು.

ವಿಮಾದಾರನಿಂದ ಠೇವಣಿ ಮಾಡಲಾದ ಶಾಸನಬದ್ಧ ಮೊತ್ತವನ್ನು ಅದರೊಂದಿಗೆ ವಿಮಾದಾರನ ಪರವಾಗಿ ಹಾಜರಾದ ಅಧಿಕೃತ ಪ್ರತಿನಿಧಿ/ಅಧಿಕಾರಿ ಅಥವಾ ನ್ಯಾಯವಾದಿಯ ಮೂಲಕ ಮರುಪಾವತಿ ಮಾಡತಕ್ಕದ್ದು.

ಗುಣಾವಗುಣಗಳ ಮೇಲಿನ ಪ್ರಮುಖ ವಿಷಯದ ವಿಲೆಯ ದೃಷ್ಟಿಯಿಂದ, ಠೇವಣಿಯಿಡಲಾದ ಮೊತ್ತವನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಸಂಕೀರ್ಣ ಸಿವಿಲ್ ಸಂ. 7719/2011 ಪರಿಗಣನೆಗಾಗಿ ಊರ್ಜಿತವಾಗುವುದಿಲ್ಲ ಮತ್ತು ಅದಕ್ಕನುಸಾರವಾಗಿ ವಿಫಲವಾಗಿದೆಯೆಂದು ವಿಲೇ ಮಾಡಲಾಗಿದೆ.

ಅದಕ್ಕನುಸಾರವಾಗಿ ಐತೀರ್ಪನ್ನು ನೀಡಲು ಕಚೇರಿಗೆ ನಿರ್ದೇಶಿಸಲಾಗಿದೆ.

---